ಓಎಸ್ ನಂ. 171/2015
ಪಿ ಡಬ್ಲ್ಯೂ -1

**ಸಾಕ್ಷಿಯನ್ನು ದಿನಾಂಕಃ-15.02.2021 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**
**ಪಾಟೀಸವಾಲುಃ ಶ್ರೀ ಎಸ್.ಎನ್.ಹೆಚ್. ವಕೀಲರಿಂದ**

**1.** ಖಾತೆ ನಂ. 483 ರ ಪೂರ್ವಕ್ಕೆ ದಾವಾ ಸ್ವತ್ತು ಬರುತ್ತದೆ. ಖಾತೆ ನಂ. 483 ನನ್ನ ಅಣ್ಣನ ಮಗಳು ಆಶಾರವರ ಹೆಸರಿನಲ್ಲಿದೆ ಎಂದರೆ ಸರಿ. ಅದು ಅವರ ಭಾಗದ ಆಸ್ತಿ ಎಂದರೆ ಸರಿ. ಖಾತೆ ನಂ. 483 ಮತ್ತು 484 ಮೊದಲು ಒಂದೇ ಆಗಿದ್ದು ನಾವು ವಿಭಾಗವಾದ ಮೇಲೆ ಅವು ಬೇರೆ ಬೇರೆಯಾಗಿರುತ್ತವೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮೂಲತಃ ನನ್ನ ತಾತ ವೆಂಕಟಶಾಮಯ್ಯನವರಿಗೆ ಸೇರಿತ್ತು. ಅವರ ತಂದೆಯ ಹೆಸರು ದಾಸಪ್ಪ. ನನ್ನ ತಾತನಿಗೆ ದಾವಾ ಸ್ವತ್ತು ಹೇಗೆ ಬಂದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ತಾತ ಮರಣಹೊಂದಿ ಸುಮಾರು 40 ವರ್ಷ ಆಗಿದೆ. ಅವರ ಮರಣದ ದಿನಾಂಕ ನನಗೆ ಗೊತ್ತಿಲ್ಲ. ಆಗ ನಾನು ಚಿಕ್ಕ ಹುಡುಗನಿದ್ದೆ. ಅಂದರೆ ನನಗೆ 14-15 ವರ್ಷವಾಗಿತ್ತು. ವೆಂಕಟಶಾಮಯ್ಯನವರ ಮರಣಾನಂತರ ಖಾತೆ ಹಾಗೆಯೇ ಉಳಿದಿದ್ದು, ನನ್ನ ತಂದೆಯ ಮರಣಾನಂತರ ನೇರವಾಗಿ ನನ್ನ ಹೆಸರಿಗೆ ಬಂದಿರುತ್ತದೆ.

**2.** ನಾವು ಇಬ್ಬರು ಅಣ್ಣ-ತಮ್ಮಂದಿರು. ನನ್ನ ಅಣ್ಣನ ಹೆಸರು ಆರ್.ಎಸ್. ಲಕ್ಷ್ಮೀಕಾಂತ. ಅವರು ಅಕ್ಕಿರಾಂಪುರ ಗ್ರಾಮ ಪಂಚಾಯ್ತಿಯ ಖಾಯಂ ಸದಸ್ಯರಾಗಿರುತ್ತಾರೆ ಎಂದರೆ ಸುಳ್ಳು. ಈ ದಾವೆ ಹಾಕುವುದಕ್ಕೂ ಮೊದಲು ಅವರು ಒಂದು ಬಾರಿ ಸದರಿ ಗ್ರಾಮ ಪಂಚಾಯ್ತಿಯ ಸದಸ್ಯರಾಗಿದ್ದರು. ಈ ದಾವೆಯ ವಿವಾದ ಉಂಟಾದಾಗ ಅವರು ಸದಸ್ಯರಾಗಿರಲಿಲ್ಲ. ನನ್ನ ಅತ್ತಿಗೆಯೂ ಸಹ ಅದೇ ಗ್ರಾಮ ಪಂಚಾಯ್ತಿಯ ಸದಸ್ಯರು ಅಂದರೆ ಈಗ ಅವರು ಸದಸ್ಯರಾಗಿರುತ್ತಾರೆ. ನನ್ನ ಮತ್ತು ನನ್ನ ಅಣ್ಣನ ನಡುವೆ ವಿಭಾಗದ ದಾವೆಯು ಇದೇ ನ್ಯಾಯಾಲಯದಲ್ಲಿ ತೀರ್ಮಾನವಾಗಿರುತ್ತದೆ. ಆ ದಾವೆಯಲ್ಲಿ ಈ ಆಸ್ತಿ ಸೇರಿಸಿರಲಿಲ್ಲ. ಭಾಗದ ದಾವೆಯನ್ನು ನನ್ನ ಹೆಂಡತಿ ನನ್ನ ಮೇಲೆ ಹಾಕಿದ್ದರು ಎಂದು ನುಡಿಯುತ್ತಾರೆ.

**3.** ಖಾತೆ ನಂ. 484 ಮತ್ತು ಪ್ರತಿವಾದಿಯ ಖಾತೆ ನಂ. 444 ರ ಮಧ್ಯೆ ಎಷ್ಟು ದೂರ ಇದೆ ಎಂದರೆ ಅವುಗಳ ನಡುವೆ ರಸ್ತೆ ಇದೆ ಎಂದು ನುಡಿಯುತ್ತಾರೆ. ಅವುಗಳು ಸುಮಾರು ಅರ್ಧ ಕಿ.ಮೀ. ದೂರದಲ್ಲಿವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಚಕ್ಕುಬಂಧಿಯನ್ನು ಸರಿಯಾಗಿ ನೀಡಿಲ್ಲ ಎಂದರೆ ಸರಿಯಲ್ಲ. ಖಾತೆ ನಂ. 484 ರ ಚಕ್ಕುಬಂಧಿ ಬೇರೆ ಇದ್ದು ದಾವೆಯಲ್ಲಿ ನೀಡಿರುವ ಚಕ್ಕುಬಂಧಿ ತಪ್ಪಾಗಿದೆ ಎಂದರೆ ಸರಿಯಲ್ಲ. ಅಕ್ಕಿರಾಂಪುರದಲ್ಲಿ ನನಗೆ ಸೇರಿದ ಸ್ವತ್ತು ದಾವಾ ಸ್ವತ್ತು ಒಂದೇ ಇರುವುದು. ದಾವಾ ಸ್ವತ್ತು ಖಾತೆ ನಂ. 483 ರ ಪಶ್ಚಿಮಕ್ಕೆ ಬರುತ್ತದೆ ಎಂದರೆ ಸರಿಯಲ್ಲ. ದಾವೆಯ ಷೆಡ್ಯೂಲ್ನಲ್ಲಿ ತೋರಿಸಿದ ಚಕ್ಕುಬಂಧಿಯ ಒಳಗೆ ಪ್ರತಿವಾದಿಯ ಖಾತೆ ನಂಬರ್ 444 ಬರುತ್ತದೆ ಎಂದರೆ ಸರಿಯಲ್ಲ.

**4.** ನನ್ನ ಅಣ್ಣ ಗ್ರಾಮ ಪಂಚಾಯ್ತಿಯ ಸದಸ್ಯನಾಗಿದ್ದ ಸಮಯದಲ್ಲಿ ಸುಳ್ಳು ಖಾತೆಯನ್ನು ಸೃಷ್ಟಿ ಮಾಡಿಕೊಂಡು ನನ್ನ ಮೂಲಕ ಈ ದಾವೆ ಹಾಕಿಸಿದ್ದಾರೆ ಎಂದರೆ ಸುಳ್ಳು. ಪರವಾನಿಗೆಯನ್ನು ಅವರ ಪ್ರಭಾವದಿಂದಲೇ ಪಡೆದಿರುತ್ತೇನೆ ಎಂದರೆ ಸುಳ್ಳು. ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನದಲ್ಲಿ ಇಲ್ಲ ಎಂದರೆ ಸುಳ್ಳು. ಅದರಲ್ಲಿ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಖಾತೆ ನಂ. 444 ರ ಪಶ್ಚಿಮಕ್ಕೆ ರಸ್ತೆ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಉತ್ತರಕ್ಕೆ ಶಾಂತಮ್ಮ ಎಂಬುವವರು ಇದ್ದು ಅವರಿಗೆ ಖಾತೆಯನ್ನು ನನ್ನ ಅಣ್ಣನೇ ಮಾಡಿಕೊಟ್ಟಿದ್ದನು ಎಂದರೆ ನನಗೆ ಗೊತ್ತಿಲ್ಲ. ಸುಳ್ಳು ಖಾತೆ ಸೃಷ್ಟಿ ಮಾಡಿಕೊಂಡು ಪ್ರತಿವಾದಿಗೆ ನಾನೇ ತೊಂದರೆ ಕೊಟ್ಟಿದ್ದೇನೆ ಎಂದರೆ ಸುಳ್ಳು.

**5.** ದಾವಾ ಸ್ವತ್ತಿನಲ್ಲಿ ಕಲ್ಲು ಕಂಬಗಳನ್ನು ಪ್ರತಿವಾದಿ ನಿಲ್ಲಿಸಿ ಕಾಂಪೌಂಡ್ ಮಾಡಿದ್ದಾರೆ ಎಂದರೆ ಸುಳ್ಳು. ಆ ಕಾಂಪೌಂಡಿನ ಪೂರ್ವಕ್ಕೆ ಪ್ರತಿವಾದಿಯ ಮನೆ ಇದೆ ಎಂದರೆ ಸುಳ್ಳು. ಕಾಂಪೌಂಡಿಗೂ ಮತ್ತು ಪ್ರತಿವಾದಿಯ ಮನೆಯ ನಡುವೆ ಯಾವುದೇ ಜಾಗವಿಲ್ಲ ಎಂದರೆ ಸರಿಯಲ್ಲ. ಪೂರ್ವದಿಂದ ಪಶ್ಚಿಮಕ್ಕೆ ಇರುವ ರಸ್ತೆಗೆ ಎಷ್ಟು ದೂರವಿದೆ ಎಂದರೆ ಗೊತ್ತಿಲ್ಲ. ಕಾಂಪೌಂಡಿಗೂ ಮತ್ತು ಪ್ರತಿವಾದಿಯ ಮನೆಯ ನಡುಗೆ ಎಷ್ಟು ಅಡಿ ರಸ್ತೆ ಇದೆ ಎಂದರೆ 8-10 ಅಡಿ ರಸ್ತೆ ಇರಬಹುದು. ಸದರಿ ಕಾಂಪೌಂಡ್ 30*40 ಅಡಿ ಇದೆ. ಪ್ರತಿವಾದಿಯ ಮನೆಯ ವಿಸ್ತೀರ್ಣ ಎಷ್ಟು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ಮನೆ ಮತ್ತು ಕಲ್ಲಿನ ಕಾಂಪೌಂಡ್ ಇರುವ ಸ್ವತ್ತು ಎರಡೂ ಸೇರಿ ಖಾತೆ ನಂ. 444 ಆಗಿರುತ್ತದೆ ಎಂದರೆ ಸುಳ್ಳು. ಅದು ಪ್ರತಿವಾದಿಯ ಸುಪರ್ದಿಯಲ್ಲಿದೆ ಎಂದರೆ ಸುಳ್ಳು.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಹಿ/-**

**ಸಿ.ಜೆ ಮತ್ತು ಜೆಎಂ.ಎಫ್ ಸಿ**

**ಕೊರಟಗೆರೆ**